1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ 2433/2014

ಚಾಸಾಃ 16 ಪ್ರಾಸಾಃ5

ದಿನಾಂಕಃ 07.07.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ರೇವತಿ |
| ಗಂಡನ ಹೆಸರು | : | ರಾಜು ಟಿ ಶೆಟ್ಟಿಗಾರ್ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಪಿ ಐ, ಲೋಕಾಯುಕ್ತ ಬೆಂಗಳೂರು ಸಿಟಿ |
| ವಾಸ ಸ್ಥಳ | : | ಬೆಂಗಳೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ (ವಿ.ಸಿ ಮೂಲಕ)**

ನಾನು 20-10-2012 ರಿಂದ 28-09-2013ರವರೆಗೆ ಕುಂದಾಪುರದ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 21-10-2011 ರಂದು ಈ ಪ್ರಕರಣದ ಕಡತವನ್ನು ಪಿ ಎಸ್ ಐ ರವರಾದ ಜಯರಾಮ ಗೌಡರವರಿಂದ ಪಡೆದುಕೊಂಡು ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

ಪ್ರಕರಣದಲ್ಲಿ ಕೈ ಬರಹ ತಜ್ಞ ವರದಿ ಬರಲು ಬಾಕಿ ಇದ್ದುದರಿಂದ ಕೋರಿಕೆ ಪತ್ರವನ್ನು ಮಡಿವಾಳ ಎಫ್ ಎಸ್ ಎಲ್ ರವರಿಗೆ ಕಳುಹಿಸಿರುತ್ತೇನೆ. ಈ ಪ್ರಕರಣದಲ್ಲಿ ಎಫ್ ಎಸ್ ಎಲ್ ವರದಿ ಬಾರದೆ ಇದ್ದುದರಿಂದ ಮೇಲಾಧಿಕಾರಿಯವರ ಆದೇಶದಂತೆ ಎಫ್ ಎಸ್ ಎಲ್ ವರದಿಯನ್ನು ಬಾಕಿ ಇಟ್ಟು ಪ್ರಕರಣದ ಸಾಕ್ಷ್ಯಧಾರಗಳ ಆಧಾರದ ಮೇಲೆ ಆರೋಪಿಗಳ ವಿರುದ್ದ ದಿಃ 28-12-2012 ರಂದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ        ರವರಿಂದಃ**

ಈ ಪ್ರಕರಣದಲ್ಲಿ ಖಾಸಗಿ ಪಿರ್ಯಾದನ್ನು ಹಾಕಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಯಾವುದೇ ಸಾಕ್ಷಿದಾರರನ್ನು ತನಿಖೆ ಮಾಡಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿತರು ಯಾವ ತಪ್ಪನ್ನು ಮಾಡಿದ್ದಾರೆ ಎಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಆರೋಪಿಗಳು ಚಾಸಾ-6 ಮತ್ತು 12 ರವರಿಂದ ಹಣ ಪಡೆದು ಹಣವನ್ನು ಬ್ಯಾಂಕಿಗೆ ಕಟ್ಟದೆ ಅಕ್ರಮ ಲಾಭಕ್ಕೆ ದುರಪಯೋಗಪಡಿಸಿಕೊಂಡಿದ್ದರಿಂದ ಪ್ರಕರಣದ ದಾಖಲೆಗಳಲ್ಲಿ ಸಾಕ್ಷ್ಯಧಾರಗಳು ಕಂಡು ಬಂದಿದ್ದರಿಂದ ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

ನೀವು ಹಣ ಕೊಟ್ಟವರು ಹಾಗೂ ಆರೋಪಿಗಳನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ಪ್ರಕರಣ ಆಗುವಾಗ ಆರೋಪಿ ಏನು ಕೆಲಸ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಬ್ಯಾಂಕಿನಲ್ಲಿ ಜವಾನನಾಗಿ ಕೆಲಸ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ಅಪರಾಧ ನಡೆಯುವ ಸಮಯದಲ್ಲಿ ಸದ್ರಿ ಬ್ಯಾಂಕಿನಲ್ಲಿ ಎಷ್ಟು ಜನ ಸಿಬ್ಬಂದಿಗಳು ಇದ್ದರು ಎಂಬುದರ ಬಗ್ಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಪೂರ್ತಿ ತನಿಖೆಯನ್ನು ಚಾಸಾ-15 ರವರು ಮಾಡಿದ್ದರಿಂದ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಸದ್ರಿ ಬ್ಯಾಂಕಿಗೆ ಹೋಗಿ ನೋಡಿರುವುದಿಲ್ಲವೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆದ್ದರಿಂದ ಅಲ್ಲಿ ಸಿಬ್ಬಂದಿಗಳ ಆಸನಗಳ ವ್ಯವಸ್ಥೆ ಯಾವ ರೀತಿಯಲ್ಲಿ ಇದೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಘಟನೆ ನಡೆದಿರುವುದು 2007 ರಿಂದ 2008ರವರೆಗೆ ಎಂದು ನುಡಿಯುತ್ತಾರೆ.

ನೀವು ಅಂತಿಮ ವರದಿಯನ್ನು ಯಾವ ಇಸವಿಯಲ್ಲಿ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ 2012ರಲ್ಲಿ ಎಂದು ನುಡಿಯುತ್ತಾರೆ. ಬ್ಯಾಂಕಿನಲ್ಲಿ ಗ್ರಾಹಕರಾದವರು ನಗದು ಹಣದ ವ್ಯವಹಾರವನ್ನು ಬ್ಯಾಂಕಿನ ಕ್ಯಾಷಿಯರ್ ಬಳಿ ಮಾಡಬೇಕು ಎಂದರೆ ಸಾಕ್ಷಿ ಹೌದು ಎಂದು

ನುಡಿಯುತ್ತಾರೆ.  ಈ ಪ್ರಕರಣದಲ್ಲಿ ಹಣ ಕೊಟ್ಟವರು ಅವರು ಬ್ಯಾಂಕಿನಲ್ಲಿ ವ್ಯವಹರಿಸಿದ್ದ ಬಗ್ಗೆ ಅನುಭವ ಹೊಂದಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದ್ರಿ ಹಣವನ್ನು ಗ್ರಾಹಕರು ಯಾವ ಖಾತೆಗೆ ಜಮಾ ಮಾಡಬೇಕಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಆದರೆ ಚಾಸಾ-15ರವರಿಗೆ ಗೊತ್ತು ಎಂದು ನುಡಿಯುತ್ತಾರೆ.

ಹಣವನ್ನು ಕಳೆದುಕೊಂಡ ಗ್ರಾಹಕರು ಬ್ಯಾಂಕಿನಲ್ಲಿ ಯಾವಾಗ ಖಾತೆ ಪ್ರಾರಂಭಿಸಿದ್ದರು ಎಂದರೆ ಸಾಕ್ಷಿ ಈ ಬಗ್ಗೆ ತನಿಖೆಯನ್ನು ಚಾಸಾ-15 ರವರು ನಡೆಸಿರುತ್ತಾರೆ ಎಂದು ನುಡಿಯುತ್ತಾರೆ. ಹಣವನ್ನು ಕಳೆದುಕೊಂಡವರು ಆರೋಪಿಗೆ ಹಣ ಕೊಟ್ಟಿದ್ದಾರೆ ಎಂದು ಯಾವ ದಾಖಲೆ ಇದೆ ಎಂದರೆ ಸಾಕ್ಷಿ ಈ ಬಗ್ಗೆ ಚಾಸಾ-15 ರವರು ವಶಕ್ಕೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಅಂತಿಮ ವರದಿಯನ್ನು ಸಲ್ಲಿಸುವ ಪೂರ್ವದಲ್ಲಿ ಕಡತವನ್ನು ನೋಡಿದ್ದೇ ಇಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆದ್ದರಿಂದ ಯಾವುದೇ ಪ್ರಶ್ನೆ ಕೇಳಿದ್ದರೂ ಚಾಸಾ-15 ರವರಿಗೆ ಗೊತ್ತಿದೆ ಎಂದು ಜಾರಿಕೆಯ ಉತ್ತರವನ್ನು ನೀಡುತ್ತಿದ್ದೀರಿ ಎಂದರೆ  ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ನಿಮಗೆ ಆರೋಪಿ ಯಾವ ತಪ್ಪು ಮಾಡಿಲ್ಲ ಎಂದು ಗೊತ್ತಿದ್ದರೂ ಸಹ ಆರೋಪಿಯ ವಿರುದ್ದ ಯಾಂತ್ರಿಕವಾಗಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಪ್ರಕರಣದ ಬಗ್ಗೆ ಏನೂ ತಿಳಿದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**(ಶ್ರೀನಿವಾಸ ಕೆ.ಆರ್)**
**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**